ಇ) ಉದ್ಭವಿಸುವುದಿಲ್ಲ.

ಬೀರೂರು ಜನರಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

1837(2051)

ಶ್ರೀ ಮಲ್ಲಿಕಾರ್ಜುನ ಕೆ.ಬಿ.(ಬೀರೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೀರೂರು ಜನರಲ್ ಆಸ್ಪತ್ರೆಯನ್ನು 100 ಹಾಸಿಗೆ ಆಸ್ಪತ್ರೆಯ ಮೇಲ್ದರ್ಜೆಗೇರಿಸಲಾಗಿದೆಯೆ? ಹಾಗಿದ್ದಲ್ಲಿ ಈ ಆಸ್ಪತ್ರೆಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆಯೇ? ಈ ವರ್ಷದ ಆಯವ್ಯಯದಲ್ಲಿ ಕಾದಿರಿಸಿದ ಮೊಬಲಗೆಷ್ಟು?

ಆ. ಈ ಆಸ್ಪತ್ರೆಗೆ ಮಂಜೂರಾಗಿರುವ ಹಾಗೂ ಖಾಲಿ ಇರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವೈದ್ಯರು ಹಾಗೂ ವೈದ್ಯಕೀಯರು) ಹುದ್ದೆವಾರು ವರದಿ ನೀಡುವುದು?

ಇ. ಆರೋಗ್ಯ ಕೇಂದ್ರ (100 ಹಾಸಿಗೆ)ಗಳನ್ನು ಮೇಲ್ದರ್ಜೆಗೆ ಏರಿಸಿದ ನಂತರ ಸಿಬ್ಬಂದಿ ವರ್ಗಗಳ ಹುದ್ದೆಗಳನ್ನು ಮಂಜೂರಾತಿ ನೀಡುವ ಕಾರ್ಯಕ್ರಮ ಮಾಡಲಾಗಿದೆಯೇ?

ಡಾ॥ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಬೀರೂರು ಜನರಲ್ ಆಸ್ಪತ್ರೆಯನ್ನು 100 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿರುವುದಿಲ್ಲ.

ಪ್ರಸ್ತುತ ಅಸ್ತಿತ್ವದಲ್ಲಿರುವ 50 ಹಾಸಿಗೆಗಳ ಬೀರೂರು ಜನರಲ್ ಆಸ್ಪತ್ರೆಯನ್ನು ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ರೂ.67.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನವೀಕರಿಸಿ ಅಭಿವೃದ್ಧಿಪಡಿಸಲಾಗುತ್ತಿದೆ. ಕಾಮಗಾರಿಗಳನ್ನು ಆಗಸ್ಟ್ 98ರಲ್ಲಿ ಪ್ರಾರಂಭಿಸಿದ್ದು ಇದುವರೆಗೆ ರೂ.56.00 ಲಕ್ಷ ವೆಚ್ಚ ಮಾಡಲಾಗಿದೆ. ಕಾಮಗಾರಿಗಳ ಪ್ರಗತಿಗಳಿಗೆ ಅನುಗುಣವಾಗಿ ಆಗಿಂದಾಗ್ಗೆ ಮೊಬಲಗನ್ನು ಪಾವತಿ ಮಾಡಲಾಗುತ್ತಿದೆ. ಈ ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಸಲಕರಣೆ ಇತ್ಯಾದಿಗಳನ್ನು ಒದಗಿಸಲಾಗಿದೆ.

ಆ. ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ.

ಹುದ್ದೆಯ ಹೆಸರು	ಮಂಜೂರಾದ	ಕಾರ್ಯನಿರತ	ಖಾಲಿ
ವೈದ್ಯರು.....	5	5	-
ಫಾರ್ಮಸಿಸ್ಟ್.....	2	2	-
ಕ್ಷ-ಕಿರಣ ತಂತ್ರಜ್ಞ...	1	1	-
ಪ್ರಯೋಗ ಶಾಲಾ ತಂತ್ರಜ್ಞರು....	2	2	-
ಶುಶ್ರೂಷಕರು.....	4	4	-
ಇತರರು.....	27	24	3

ಇ, ಉದ್ಭವಿಸುವುದಿಲ್ಲ.

ಉಚ್ಚಗಾಂ ಕ್ಷೇತ್ರದ ಮಣ್ಣೂರಿನಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಮರಾಠಿ ವಿಭಾಗ ತೆರೆಯುವ ಕುರಿತು.

1838(2300)

ಶ್ರೀ ಮನೋಹರ್ ಪುನ್ನಪ್ಪ ಕಾಡೊಲ್ಕರ್(ಉಚ್ಚಗಾಂವ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಚ್ಚಗಾಂ ಕ್ಷೇತ್ರದ ಮಣ್ಣೂರಿನಲ್ಲಿ ಹೊಸದಾಗಿ ಆರಂಭವಾಗಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಮರಾಠಿ ವಿಭಾಗ ತೆರೆಯಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ. ಬೆಳಗಾವಿ ಜಿಲ್ಲೆಯ ಮಣ್ಣೂರಿನಲ್ಲಿರುವ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯು ಹೊಸದಾಗಿ ಪ್ರಾರಂಭವಾದ ಸಂಸ್ಥೆಯಲ್ಲ. ಅಲ್ಲದೆ, ಬೆಳಗಾವಿ ಜಿಲ್ಲೆಯಲ್ಲಿ ಈಗಾಗಲೇ ಮರಾಠಿ ವಿಭಾಗಗಳನ್ನು ಹೊಂದಿರುವ ಮೂರು ಶಿಕ್ಷಕ ತರಬೇತಿ ಸಂಸ್ಥೆಗಳಿದ್ದು